# ಗೊಮ್ಮಟನ ಸನ್ನಿಧಿಯಲ್ಲಿ...

ಶ್ರವಣಬೆಳಗೊಳದ ಚುಂಬಕಮೂರ್ತಿ ಬಾಹುಬಲಿ. ಆದರೆ, ಗುಳಕಾಯಜ್ಜಿ ಹಾಗೂ ಭರತನನ್ನು ಕಣ್ತುಂಬಿಕೊಳ್ಳದಿದ್ದರೆ ಬೆಳಗೊಳದ ದರ್ಶನ ಪೂರ್ಣವಾಗಲಾರದು. ಬಾಹುಬಲಿ ನಮಗೆ ಅರ್ಥಪೂರ್ಣವಾಗಿ ದಕ್ಕಬೇಕಾದಲ್ಲಿ ಭರತ, ಗುಳಕಾಯಜ್ಜಿಯರನ್ನು ಕಣ್ಣುಗಳಂತೆ ಧರಿಸಬೇಕು. ಒಬ್ಬರು, ತನ್ನೊಳಗಿನ ಅಹಂಕಾರ, ಅಂಧಕಾರದಲ್ಲಿ ಹೂತುಹೋದವರು; ಮತ್ತೊಬ್ಬರು ಎದುರಿನವರ ಅಹಂಕಾರವನ್ನು ಭಂಗಿಸಿದವರು.

ಬಾಹುಬಲಿ ದರ್ಶನಕ್ಕೆ ಮೊದಲೇ ಗುಳಕಾಯಜ್ಜಿ ಎದುರಾಗುತ್ತಾಳೆ. ಗೊಮ್ಮಟನದು ವಿರಾಟ್ ಸ್ವರೂಪವಾದರೆ, ಅಜ್ಜಿಯದು ಸಾಮಾನ್ಯ ರೂಪ. ಗೊಮ್ಮಟನ ಆವಾರದಲ್ಲಿ ಅಜ್ಜಿಗೆ ಸ್ಥಾನ ದೊರಕಿರುವುದರ ಹಿಂದೊಂದು ಕಥೆಯಿದೆ. ಅದು ಚಾವುಂಡರಾಯನ ಗರ್ವಭಂಗಕ್ಕೆ ಸಂಬಂಧಿಸಿದ ಕಥೆ.

ಬೆಟ್ಟದ ಮೇಲೆ ಬೃಹತ್ ಗೊಮ್ಮಟ ಮೂರ್ತಿಯನ್ನು ಕಟೆಯಿಸಿದ ಸಂತಸದಲ್ಲಿ ಬೀಗುತ್ತಿದ್ದ ಚಾವುಂಡರಾಯ ಮಹಾ ಮಸ್ತಕಾಭಿಷೇಕ ನಡೆಸುತ್ತಿದ್ದಾನೆ. ಪವಿತ್ರ ಜಲ–ದ್ರವ್ಯಗಳನ್ನು ಕೊಳಗ ಕೊಳಗ ಸುರಿದರೂ ಅಭಿಷೇಕ ಪೂರ್ಣಗೊಳ್ಳುತ್ತಿಲ್ಲ! ನೆತ್ತಿಯಿಂದಿಳಿದ ಅಭಿಷೇಕದ ಜಲ ಹೊಟ್ಟೆಯಿಂದ ಕೆಳಕ್ಕೆ ಬರುತ್ತಲೇ ಇಲ್ಲ. ಅಭಿಷೇಕ ಪೂರ್ಣಗೊಳ್ಳದ ಅಚ್ಚರಿ–ದುಗುಡದಲ್ಲಿ ಚಾವುಂಡರಾಯ ಮುಳುಗಿದ್ದ ಸಂದರ್ಭದಲ್ಲಿ, ನೀರು ತುಂಬಿದ ಪುಟ್ಟ ಬಟ್ಟಲನ್ನು ಹಿಡಿದು ಅಜ್ಜಿಯೊಬ್ಬಳು ಅಲ್ಲಿಗೆ ಬರುತ್ತಾಳೆ. ಅಭಿಷೇಕ ಜಲದಿಂದ ಬಾಹುಬಲಿ ಮೂರ್ತಿಯನ್ನು ತೋಯಿಸಲು ರಾಯನ ಕಯ್ಯೇ ಸೋತಿರುವಾಗ, ನಿನ್ನ ಗುಳ್ಳಕಾಯಿ ಗಾತ್ರದ ನೀರಿನಿಂದೇನು ಪ್ರಯೋಜನ ಎಂದು ಅಲ್ಲಿ ನೆರೆದಿದ್ದವರು ಅಜ್ಜಿಯನ್ನು ಪ್ರಶ್ನಿಸುತ್ತಾರೆ. 'ವಯಸ್ಸಾದ ಅಜ್ಜಿಗೂ ಒಂದು ಅವಕಾಶ ದೊರಕಲಿ' ಎನ್ನುವ ಅನುಕಂಪದಿಂದ ಅಜ್ಜಿಗೆ ಅಭಿಷೇಕದ ಅವಕಾಶ ದೊರೆಯುತ್ತದೆ. ಚಾವುಂಡರಾಯ ನೋಡುತ್ತಿರುವಂತೆಯೇ, ಅಜ್ಜಿಯ ಬಟ್ಟಲ ಜಲದಿಂದ ಗೊಮ್ಮಟ ಮೂರ್ತಿಯ ಅಭಿಷೇಕ ಪಾದದವರೆಗೂ ಪೂರ್ಣಗೊಳ್ಳುತ್ತದೆ. ಅದು ಚಾವುಂಡರಾಯನ ಅಹಂಕಾರ ಭಂಗದ ಕ್ಷಣ. ಜಗತ್ತೇ ಮೆಚ್ಚುವ ವಿರಾಗ ಮೂರ್ತಿಯ ವಿರಾಟ್ ಪ್ರತಿಮೆಯನ್ನು ನಿರ್ಮಿಸಿದ ಚಾವುಂಡರಾಯನ ಹಮ್ಮಿಗೆ ಅಜ್ಜಿಯ ಗುಳಕಾಯಿ ಪ್ರಮಾಣದ ನೀರೇ ಮದ್ದಾಯಿತು. ಗುಳಕಾಯಿಯಲ್ಲಿ ನೀರು ತಂದ ಅಜ್ಜಿಯೇ ಗುಳಕಾಯಜ್ಜಿಯಾಗಿ, ತ್ಯಾಗಮೂರ್ತಿಯ ಸನ್ನಿಧಿಯಲ್ಲಿ ಕಿಂಚಿತ್ತೂ ಅಹಂಕಾರವಿಲ್ಲದ ನಿರ್ಮಲ ಭಕ್ತಿಯನ್ನು ಮನಗಾಣಿಸುವಂತೆ ನಿಂತಿದ್ದಾಳೆ.

ಯಕ್ಷಿ, ಕೂಷ್ಮಾಂಡಿನಿದೇವಿ ಎಂದೆಲ್ಲ ಗುಳಕಾಯಜ್ಜಿಯನ್ನು ಬಣ್ಣಿಸುತ್ತಾರೆ. ದೇವಿಯ ರೂಪದಲ್ಲಿ ಕಾಣುವುದಕ್ಕಿಂತಲೂ ಸಾಮಾನ್ಯ ತಾಯಿಯ ರೂಪದಲ್ಲಿಯೇ ಗುಳಕಾಯಜ್ಜಿ ಹತ್ತಿರವಾಗುತ್ತಾಳೆ. ಗುಳಕಾಯಜ್ಜಿಯಂಥ ತಾಯಂದಿರು ನಮ್ಮ ನಡುವೆ ಎಷ್ಟು ಮಂದಿಯಿಲ್ಲ? ಹೆಡೆಯೆತ್ತುವ ಗಂಡಿನ ಅಹಂಕಾರವನ್ನು ಹೆಣ್ಣಿನ ತಾಯ್ತನ ಶಮನಗೊಳಿಸುತ್ತಿರುತ್ತದೆ. ಎಲ್ಲ ಗಂಡುಗಳೂ ಒಂದಲ್ಲಾ ಒಂದು ಸಂದರ್ಭದಲ್ಲಿ ತಾಯಿಯೆದುರು ನಮ್ಮೆಲ್ಲ ಅಹಂಕಾರ ಕಳಚಿಕೊಂಡು ಬೆತ್ತಲೆ ಕಂದಗಳಾಗಿ ನಿಂತವರೇ ಆಗಿರುತ್ತಾರೆ.

ಗುಳಕಾಯಜ್ಜಿಯ ಮುಂದೆ ನಿಂತಾಗ ಆಹ್ಲಾದಗೊಳ್ಳುವ ಮನಸ್ಸು ಭರತನ ಸಮ್ಮುಖದಲ್ಲಿ ಖಿನ್ನವಾಗುತ್ತದೆ. ವಿಂಧ್ಯಗಿರಿಯ ನೆತ್ತಿಯಲ್ಲಿ ಬಾಹುಬಲಿ ನಿಂತಿದ್ದರೆ, ಚಂದ್ರಗಿರಿ ಭರತನ ನೆಲೆ. ಆಳ್ತನ, ಚೆಲುವು, ಮನ್ನಣೆ – ಯಾವ ರೂಪದಲ್ಲಿ ನೋಡಿದರೂ ತಮ್ಮನೆದುರು ಅಣ್ಣ ಕುಬ್ಜನೇ. ದೈಹಿಕವಾಗಿ ಮಾತ್ರವಲ್ಲ, ಅಂತರಂಗದಲ್ಲೂ ಭರತ ಕುಸಿದುಹೋಗಿದ್ದಾನೆ. ಸಾಮ್ರಾಜ್ಯಕ್ಕಾಗಿ ಅಣ್ಣನೊಂದಿಗೆ ಯುದ್ಧ ಮಾಡಿದ್ದಕ್ಕೆ ತನ್ನ ಬಗ್ಗೆ ತಾನೇ ಹೇಸಿದ ಬಾಹುಬಲಿ, ಭೋಗವನ್ನು, ಲೌಕಿಕದ ಸೆಳೆತಗಳನ್ನು ತೃಣವೆಂದು ಭಾವಿಸಿ ಬೆಟ್ಟವೇರಿ ಧ್ಯಾನಮಗ್ನನಾದ; ಗೊಮ್ಮಟನೆಂದು ಜಗದ ಗೌರವಕ್ಕೆ ಪಾತ್ರನಾದ. ಭರತನ ಕಥೆ ಹಾಗಲ್ಲ. ಆತ ಚಕ್ರರತ್ನದೊಂದಿಗೆ ಸಾಮ್ರಾಜ್ಯ ನಿರ್ವಹಣೆಯ ನೊಗಕ್ಕೂ ತಲೆ ಕೊಟ್ಟವನು. ವಿಶ್ವ ವಿಜಯಿಯಾದವನು ಒಡಹುಟ್ಟುವಿನ ಬಾಹುಬಲದೆದುರು ಭರತ ಮಣಿಯಬೇಕಾಯಿತು. ಆ ಸೋಲಿಗಿಂತಲೂ ಘೋರವೆನ್ನಿಸಿದ್ದು – ಗೆದ್ದವನು ಸೋತವನನ್ನು ನಡೆಸಿಕೊಂಡ ಬಗೆ. ಯುದ್ಧವನ್ನು ಜಯಿಸಿದವನು ಗೆಲುವಿನ ಪತಾಕೆ ನೆಡುವುದು ಸಹಜ. ಬಾಹುಬಲಿಯೋ ಗೆದ್ದುದನ್ನು ಬಿಟ್ಟುಕೊಟ್ಟ. (ಗೆದ್ದರೆ ಗೆಲ್ಲಬೇಕು ಬಾಹುಬಲಿಯಂತೆ, ಬಿಟ್ಟುಕೊಡುವುದರಿಂದ –ಕೆ.ವಿ. ತಿರುಮಲೇಶ್.) ಯುದ್ಧದಲ್ಲಿ ಆದ ಪೆಟ್ಟಿಗಿಂತಲೂ ಬಾಹುಬಲಿಯ ಔದಾರ್ಯವೇ ಭರತನಿಗೆ ಘೋರ ಹೊಡೆತವಾಗಿ ಪರಿಣಮಿಸಿರಬೇಕು. ಸಾಮ್ರಾಜ್ಯಕ್ಕಿಂತಲೂ, ಲೌಕಿಕದ ಎಲ್ಲ ಸುಖಗಳಿಗಿಂತಲೂ ಬಾಹುಬಲಿಯ ತ್ಯಾಗ–ವಿರಾಗವೇ ದೊಡ್ಡದೆನ್ನುವ ಲೋಕದ ಕೊಂಡಾಟ ತನ್ನ ಕುರಿತ ಟೀಕೆಟಿಪ್ಪಣಿಯೂ ಆಗಿರುವುದನ್ನು ಭರತ ಅರಿಯನೆ? ಸೋಲಿನಿಂದ ಭರತನ ದೊರೆತನದ ಅಹಂಕಾರವೇನೋ ಅಳಿಯಿತು. ಆದರೆ, ಸೋಲು ಉಂಟು ಮಾಡಿದ ವಿಷಣ್ಣತೆ ಭರತ ಒಳಗೊಳಗೇ ಕುಸಿಯುವಂತೆ ಮಾಡಿತು. ತಮ್ಮನದು ಮುಗಿಲು ಮುಟ್ಟುವ ತವಕ, ಅಣ್ಣನದು ಪಾತಾಳದತ್ತ ಕುಸಿತ.

ತಮ್ಮನನ್ನು ನೋಡಲಾರೆ ಎನ್ನುವಂತೆ ಚಂದ್ರಗಿರಿಯ ಭರತ ಬಾಹುಬಲಿಗೆ ಬೆನ್ನುಮಾಡಿದ್ದಾನೆ. ಲಜ್ಜೆ, ಪಾಪಪ್ರಜ್ಞೆ ಅವನನ್ನು ಕುಸಿಯುವಂತೆ ಮಾಡಿವೆ. ಭರತ ಸೊಂಟಮಟ್ಟ ಹೂತುಹೋಗಿದ್ದಾನೆ.

ಬಾಹುಬಲಿಯ ಮುಂದೆ ಮಣಿವ ಮನಸ್ಸು, ಭರತನೆದುರು ವಿಷಣ್ಣವಾಗುತ್ತದೆ. ಆ ವಿಷಣ್ಣತೆಗೆ ಕಾರಣವಿಲ್ಲದಿಲ್ಲ. ಭರತ ನಮಗೆ ಹೊರಗಿನವನಲ್ಲ; ಒಳಗಿನವನು. ಅಹಂಕಾರ, ಮೋಹ, ಲೌಕಿಕದ ಸೆಳೆತಗಳಲ್ಲಿ ನಾವು ಭರತನಿಗೆ ಹತ್ತಿರದವರು. ಅರ್ಧ ದೇಹ ಹೂತುಹೋಗಿರುವ ಭರತ ನಾವು ಮುಚ್ಚಿಟ್ಟುಕೊಂಡಿರುವ ನಮ್ಮ ಪತನವನ್ನು ಬಯಲು ಮಾಡುವಂತೆ ಕಾಣಿಸುತ್ತಾನೆ. ಭರತ ವಸ್ತುಸ್ಥಿತಿ–ಬಂಧನ; ಬಾಹುಬಲಿ ಆದರ್ಶ–ಬಿಡುಗಡೆ. ಅಹಂಕಾರವನ್ನು ನೀಗಿಕೊಳ್ಳುವ ಪ್ರತಿ ಹೆಜ್ಜೆಯೂ ನಮ್ಮನ್ನು ಬಾಹುಬಲಿಗೆ ಹತ್ತಿರವಾಗಿಸುತ್ತದೆ ಎನ್ನುವುದು ನಿಜವಾದರೂ 'ಭರತತನ' ಸುಲಭವಾಗಿ ನೀಗಿಕೊಳ್ಳುವಂತಹದ್ದಲ್ಲ. ನಮ್ಮ ಮಾತು, ಮಮತೆ, ನೋಟ – ಅಹಮ್ಮಿನ ಸೊಲ್ಲು ಯಾವುದರಲ್ಲಿಲ್ಲ? ಹೂತು ಹೋಗುವುದನ್ನೇ ಸಾಧನೆಯೆಂದು ನಮ್ಮನ್ನು ನಂಬಿಸಿಕೊಂಡಿದ್ದೇವೆ. ಬಾಹುಬಲಿ ಎತ್ತರೆತ್ತರಕ್ಕೆ ಬೆಳೆಯುವುದನ್ನು ಬೆರಗಿನಿಂದ ನೋಡುತ್ತಲೇ, ನಮ್ಮ ಕುಸಿತದ ಸುತ್ತ ಮರೆವೆಯ ಪರದೆ ತೊಡಿಸಿದ್ದೇವೆ.

'ನಾನು', 'ನನ್ನಿಂದ' ಎನ್ನುವ ಮನೋಭಾವಕ್ಕೆ ಭರತ ಮತ್ತು ಗುಳಕಾಯಜ್ಜಿ ಪೆಟ್ಟುಕೊಡುವಂತಿದ್ದಾರೆ. ಈ ಇಬ್ಬರೂ ಗೊಮ್ಮಟನತ್ತ ನಮ್ಮನ್ನು ಕರೆದೊಯ್ಯುವ ಅರಿವಿನ ದಾರಿಗಳು.

**■ ಚಂಪಕಮಾಲಾ**

## ಮಾತೇ ಮುತ್ತು

- ಮನೆಯಾಕೆ ಸೃಷ್ಟಿಸುವ ವಾತಾವರಣವೇ ಮನೆಯ ವಾತಾವರಣ.

  —ಬೀಚಿ
- ಮೂಢನಂಬಿಕೆಯುಳ್ಳ ವಿದ್ಯಾವಂತನು ಮೂಢನಂಬಿಕೆ ಹೊಂದಿದ ಅವಿದ್ಯಾವಂತನಿಗಿಂತ ಹೆಚ್ಚು ಅಪಾಯಕಾರಿ.

  —ಎಚ್. ನರಸಿಂಹಯ್ಯ
- ತಾನು ಆಚರಿಸದೆ ಮತ್ತೊಬ್ಬರು ಮಾತ್ರ ಆಚರಿಸಬೇಕೆಂದು ದ್ವಿವಿಧವಾದುದು ಎಂದೂ ಧರ್ಮವೆನಿಸಿಕೊಳ್ಳುವುದಿಲ್ಲ.

  —ತ.ರಾ. ಸುಬ್ಬರಾವ್
- ನಿನ್ನನ್ನು ನೀನು ತಿಳಿದುಕೊಳ್ಳೋದು ನಿನ್ನ ಮನಸ್ಸನ್ನು ಹದಗೊಳಿಸಿಕೊಂಡಾಗ ಮಾತ್ರ.

  —ಮಹಾತ್ಮ ಗಾಂಧಿ
- ಬುದ್ಧಿಯ ಜ್ಞಾನ ಬೇರೆ, ಹೃದಯದ ಜ್ಞಾನ ಬೇರೆ.

  —ಜಿ.ಪಿ. ರಾಜರತ್ನಂ
- ಕ್ರಾಂತಿ ಎಂದರೆ ಹಳೆಯದರ ನಾಶವಲ್ಲ. ಹಳೆಯದರಲ್ಲಿ ಏನೇನು ಒಳ್ಳೆಯದು ಇದೆಯೋ ಅದನ್ನು ಉಳಿಸಿಕೊಂಡು ಹೊಸ ಬದುಕನ್ನು ಕಟ್ಟಿಕೊಳ್ಳುವುದು.

  —ಜಿ.ಎಸ್. ಶಿವರುದ್ರಪ್ಪ